# ಸಹಾಯಕ ಆಯುಕ್ತರ ನ್ಯಾಯಾಲಯ, ಬಳ್ಳಾರಿ

ಸಂ: ಕಂದಾಯ/ಅಪೀಲು/230/15-16 ದಿನಾಂಕ :08-07-2016

ಉಪಸ್ಥಿತರು: **ಶ್ರೀ ಲೋಕೇಶ್ ಪಿ.ಎನ್** (ಕ.ಆ.ಸೇ)

**ಸಹಾಯಕ ಆಯುಕ್ತರು, ಬಳ್ಳಾರಿ.**

| ವಾದಿಗಳು | ಪ್ರತಿವಾದಿಗಳು |
|---|---|
| 1.ಶ್ರೀ ಎನ್ ಆರ್ ವೀರನಗೌಡ ತಂದೆ ಶರಭನಗೌಡ ನಡವಿ ಗ್ರಾಮ ಸಿರುಗುಪ್ಪಾ ತಾಲೂಕು<br>**(ಶ್ರೀ ಬಿ.ಪರ್ವತರೆಡ್ಡಿ ವಕೀಲರು ಬಳ್ಳಾರಿ)** | 1)ತಹಶೀಲ್ದಾರರು ಬಳ್ಳಾರಿ<br>2)ಕಂದಾಯ ನಿರೀಕ್ಷಕರು ಬಳ್ಳಾರಿ<br>3)ಗ್ರಾಮಲೆಕ್ಕಾಧಿಕಾರಿಗಳು ಬಳ್ಳಾರಿ |

**ದಾವಾ ಜಮೀನಿನ ವಿವರ :-**

| ತಾಲ್ಲೂಕು | ಗ್ರಾಮ | ಸ. ನಂ. | ವಿಸ್ತೀರ್ಣ (ಎಕರೆಗಳಲ್ಲಿ) |
|---|---|---|---|
| ಬಳ್ಳಾರಿ | ಬಳ್ಳಾರಿ | 248/ಎ/2 ಪೈಕಿ | 0.2.75 (0.2.3/4) |

--@@@--

ವಾದಿಯು ಅವರ ವಕೀಲರ ಮುಖಾಂತರ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 136(2) ರಡಿಯಲ್ಲಿ ಕಂದಾಯ ನಿರೀಕ್ಷಕರು ಬಳ್ಳಾರಿ ಇವರ ಎಂ ಆರ್ ನಂ 271/91-92 ಆದೇಶದ ವಿರುದ್ಧ ಈ ನ್ಯಾಯಾಲಯಕ್ಕೆ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ. ಸದರಿ ಮೇಲ್ಮನವಿಯನ್ನು ಸಲ್ಲಿಸುವಲ್ಲಿ ಆದ ವಿಳಂಬಕ್ಕೆ ಕಾಲಮಿತಿ ಕಾಯ್ದೆಯಡಿ ವಿಳಂಬ ಮನ್ನಾಕ್ಕೆ ಅರ್ಜಿ ಸಲ್ಲಿಸಿರುತ್ತಾರೆ. ವಿಳಂಬ ಮನ್ನಾ ಮಾಡಿ ಪ್ರಕರಣವನ್ನು ದಾಖಲಿಸಿಕೊಳ್ಳಲಾಗಿರುತ್ತದೆ. ನೈಸರ್ಗಿಕ ನ್ಯಾಯ ದೃಷ್ಠಿಯಿಂದ ಉಭಯ ಪಕ್ಷಗಾರರಿಗೂ ನೋಟೀಸಗಳನ್ನು ಕಳುಹಿಸಿ ದಿನಾಂಕ: 08-07-2016 ರಂದು ಪ್ರಕರಣದ ವಿಚಾರಣೆಯನ್ನು ಕೈಗೊಳ್ಳಲಾಗಿರುತ್ತದೆ.

ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ವಾದಿಗಳ ಪರ ವಕೀಲರು 08-07-2016 ರಂದು ಪ್ರಕರಣದ ವಿಚಾರಣೆಗೆ ಹಾಜರಾಗಿರುತ್ತಾರೆ. ವಾದಿಗಳು ಬಳ್ಳಾರಿ ತಾಲ್ಲೂಕು ಬಳ್ಳಾರಿ ಗ್ರಾಮದ ಸ.ನಂ 248/ಎ/2 ಪೈಕಿ ವಿಸ್ತೀರ್ಣ: 0.02.75 ಎಕರೆ ಜಮೀನನ್ನು ನೊಂದಾಯಿತ ಕ್ರಯ ಪತ್ರ 1311/91-92 ದಿನಾಂಕ 20-08-1991 ರಂದು **ಶ್ರೀಮತಿ ಕೊಂಡಮ್ಮ ಗಂಡ ಡಿ.ದುರ್ಗಪ್ಪ** ಇವರಿಂದ ಕ್ರಯಕ್ಕೆ ಪಡೆದಿರುತ್ತಾರೆ. ಸದರಿ ಕ್ರಯ ಹೊಂದಿದ ಜಮೀನಿಗೆ ಸಂಬಂಧಿಸಿದಂತೆ ಕಂದಾಯ ನಿರೀಕ್ಷಕರು ಬಳ್ಳಾರಿ ಇವರ ಹಕ್ಕುಬದಲಾವಣೆ ಸಂಖ್ಯೆ 271/91-92 ದಿನಾಂಕ 27-11-1991 ರಂದು ಹಕ್ಕು ಬದಲಾವಣೆ ಮಂಜೂರಾಗಿರುತ್ತದೆ, ಹಾಗೂ 1991-92 ನೇ ಸಾಲಿನ ಕೈಬರಹ ಪಹಣಿಯಲ್ಲಿ ಮೇಲ್ಮನವಿದಾರರ ಹೆಸರು ನಮೂದಾಗಿದ್ದು, ಗಣಕಿಕೃತ ಪಹಣಿಯಲ್ಲಿ ನಮೂದಾಗಿರುವುದಿಲ್ಲ. ಕಾರಣ ಗಣಕಿಕೃತ ಪಹಣಿಯಲ್ಲಿ ನಮೂದು ಮಾಡಿಕೊಡುವಂತೆ ಕೋರಿರುತ್ತಾರೆ.

ಮುಂದುವರೆದು ವಾದಿಗಳು ಸಲ್ಲಿಸಿದ ಈ.ಸಿ, 91-92ನೇ ಸಾಲಿನ ಕೈಬರಹ ಪಹಣಿ , ಕ್ರಯ ಪತ್ರ ಮತ್ತು ಹಕ್ಕುಬದಲಾವಣೆ ನಕಲು ಪ್ರತಿಯನ್ನು ಪರಿಶೀಲಿಸಲಾಗಿ ಮೇಲ್ಮನವಿ ದಾರರ ಹೆಸರು ಈಗಾಗಲೆ ಕೈಬರಹ ಪಹಣಿಯಲ್ಲಿ ನಮೂದಾಗಿದ್ದು ಕಂಡು ಬಂದಿದ್ದು, ಗಣಕಿಕೃತ ಪಹಣಿಯಲ್ಲಿ ನಮೂದಿಸವ ಕುರಿತು ಈ ಕೆಳಕಂಡ ಆದೇಶ.

ಮುಂದಿನ ಪುಟಕ್ಕೆ...